ಮೈಸೂರ ಗಿಜಿಟ.

ಸಂ. XXXI.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 10, ಸ॥ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಟು, ರೆಜಿಸ್ಟ್ರೇರ್ಷ್ ವ ಯುಡ್ಯೂಕೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಪೋರ್ಟ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ಟು ವ ಸೆಷ್ಷ್ ಜಡ್ಜಿರು, ಡಿಸ್ಟ್ರಿಕ್ಟ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟ್ರಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್‌ಗಳು.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.

ಸೂಚನೆ. ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ಅಕ್ಟೋಬರ್ 1896.

ನಂ. 4602.—ಲೋ. ಫಂ. 92—96, ಮೈಸೂರ್ ಗವರ್ಮೆಂಟಿನವರು 1895ನೇ ಜೂನ್ 27ನೇ ಮತ್ತು ಂ 24999—25003.—ಲೋ. ಫಂ. 82—92ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಕರಿತಿಮ್ಮನಹಳ್ಳಿ ಮತ್ತು ಕೆಂಪಾಂಬುಧಿಕೆರೆ ಗ್ರಾಮಗಳ ಕೆಲವು ಭಾಗಗಳನ್ನು ಬೆಂಗಳೂರ ಷಹರಿನ ಮ್ಯುನಿಸಿಪಲ್ ಸರಹದ್ದಿನಲ್ಲಿ ಸದರೀ ಷಹರಿನ ಪಶ್ಚಿಮ ಬಡಾವಣೆಯ ಸಂಬಂಧದಿಂದ ಅಧಿಗಿಸಿಕೊಳ್ಳೋಣವು ಮಂಜೂರ್ಮಾಡಿರುವದರಿಂದ, 1886ನೇ ಏಪ್ರಿಲ್ 15ನೇ ಮತ್ತು ಮಿನ 35ನೇ ನಂಬರ್ ಇಸ್ತಿಹಾರ್ ನಾಮೆಯಿಂದ ತಿದ್ದುಪಡಿಯಾದ ಮೇರೆ 1883ನೇ ಸೆಪ್ಟಂಬರ್ 14ನೇ ಮತ್ತು ಮಿನ 235ನೇ ನಂಬರ್ ಇಸ್ತಿಹಾರಿನೊಡನೆ ಫಾಯಿಷ್ ಮಾಡಲ್ಪಟ್ಟ ಮೇಲ್ಕಂಡ ಷಹರಿನ ಮ್ಯುನಿಸಿಪಲ್ ಸರಹದ್ದುಗಳ ತಿದ್ದುಪಡಿಯಾದ ವಿವರಣೆಯ VI ವ VIIನೇ ಕ್ಲಾಜುಗಳಿಗೆ ಈ ಕೆಳಗೆ ಕಂಡ ಪ್ಯಾರಾಗಳು ಬದಲಾಯಿಸಲ್ಪಡತಕ್ಕದ್ದು, ಮತ್ತು 1885ನೇ ಸೆಪ್ಟಂಬರ್ 14ನೇ ಮತ್ತು ಮಿನ ಕ್ಯಾಂಪ್ ನಂ. 891ನೇ ಇಸ್ತಿಹಾರ್ ಅನುಸರಿಸಿ ಫಾಯಿಷ್ಮಾಡಲ್ಪಟ್ಟ XIನೇ ಕ್ಲಾಜಿಗೆ "ಮತ್ತು ಕರಿತಿಮ್ಮನಹಳ್ಳಿ ವ ಕೆಂಪಾಂಬುಧಿಕೆರೆ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

VI. ಈ ಸ್ಥಳದಿಂದ ಲೈನು ಭೋಗನಹಳ್ಳಿ ಗ್ರಾಮದ ಪಶ್ಚಿಮ ಎಲ್ಲೆ ಉದ್ದಕ್ಕೂ ಅದು ಮೈಸೂರ ರೋಡು (ಷಹರ್ ಎಲ್ಲೆ ಕಲ್ಲು VI) ಸಂಧಿಸುವವರಿಗೆ ಹೋಗಿ, ಅಲ್ಲಿಂದ ರೋಡು ದಾಟಿ ಕರಿತಿಮ್ಮನಹಳ್ಳಿ ಗ್ರಾಮದ ರೆವಿನ್ಯೂ ಸರ್ವೆ ನಂ. 4, 2, 9, 10

ವ 6 ಯಿವುಗಳ ಹೊರ ಪಾರ್ಶ್ವ ಮತ್ತು ಅದು ಹೊಸಷಹರ್ ಎಲ್ಲೆಕಲ್ಲು VIIರ ಬಳಿ ಗವಿಪುರ ಗ್ರಾಮದ ಈ ಕಾರ್ಯ ಮೂಲೆಯನ್ನು ಸಂಧಿಸುವವರಿವಿಗೂ ಅವುಗಳನ್ನ ಕೇರಿಸಿಕೊಂಡು ಅಂಚಿನಲ್ಲಿ ಹಾದು ಹೋಗುತ್ತದೆ.

VII. ಹೊಸಷಹರ್ ಎಲ್ಲೆಕಲ್ಲು VIIರಿಂದ ಎಲ್ಲೆ ಲೈನು ಕೆಂಪಾಂಬುಧಿ ಕೆರೆಯ ರೆವಿನ್ಯೂ ಸರ್ವೆ ನಂಬರ್ 2 ಮತ್ತು ಗವಿಪುರ ಗ್ರಾಮದ ರೆವಿನ್ಯೂ ಸರ್ವೆ ನಂ. 3, 6, 8, 63, 46, 47, 62 ವ 48 ಯಿವುಗಳ ಪಶ್ಚಿಮ ಪಾರ್ಶ್ವ ಉದ್ದಕ್ಕೂ ಮತ್ತು ಗುಟ್ಟಹಳ್ಳಿ ಗ್ರಾಮದ ನೈಋತ್ಯ ಮೂಲೆಯನ್ನು ಸಂಧಿಸುವವರಿಗೂ ಅವುಗಳನ್ನು ಮತ್ತು ಗ್ರಾಮ ನಿವೇಕನವನ್ನ ಸೇರಿಸಿಕೊಂಡು ಜೊರಟು ಷಹರ್ ಎಲ್ಲೆಕಲ್ಲು VIIIನ್ನ ಸಂಧಿಸುವವರಿಗೂ ಈ ಗ್ರಾಮದ ದಕ್ಷಿಣ ಎಲ್ಲೆಯನ್ನ ಅನುಸರಿಸಿ ಹೋಗುತ್ತದೆ; 'ಈ ಕಲ್ಲಿನಿಂದ ಷಹರ್ ಎಲ್ಲೆಯು ಕಾರಂಜಿ ಬಿಸನಹಳ್ಳಿಯ ಪಶ್ಚಿಮ ಮತ್ತು ಉತ್ತರ ಎಲ್ಲೆಗಳ ಅಂಚಿನಲ್ಲಿ ಷಹರ್ ಎಲ್ಲೆಕಲ್ಲು IXರ ಬಳಿಯಿರುವ ಕೊಮಾರ ಪಾಳ್ಯದ ಕೆರೆಯ ಕೋಡಿವರಿವಿಗೆ ಹೋಗುತ್ತದೆ.

ತಾರೀಖು 26ನೇ ನವೆಂಬರ್ 1896.

ನಂ. 6432.—ಲೋ. ಫಂ. 83—96, ಲ್ಯಾಂಡ್ ಆಕ್ವಿಜಿಷ್ಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗ್ಗೂಡಿನಲ್ಲಿ ಮೆಸ್ಸರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತೆ:—

ಜಂಬರ್ ನಂ.	ಬೀದಿಯ ಹೆಸರು.	ಹೌರ್ ನಂಬರು.	ಮಾಲೀಕರ ಹೆಸರು.	ಅವಶ್ಯಕವಾಗಿರುವ ಸ್ಥಳಿನ ವಿವರ.	ಪೂರ್ಣ ಸಖ್ಯೆ ಗು.	ಉದ್ದ ಅಡಿ.	ಚಕ್ಕುಬಂದಿ.				ಷರು.
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
1	ಇಟ್ಟಿಗ್ಗೂಡಿನಲ್ಲಿ ಮೆಸ್ಸರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆ.	911	ನೆಂಜುಂಡಯ್ಯ, ಕುಪ್ಪೆನಾಮಿ ಮೊದಲಿಯಾರ್, ರಾಮುನಾಮಿ ಮೊದಲಿಯಾರ್ ಮತ್ತು ಚಾಮುಂಡಿನಾಮಿ.	ಉದು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಕೈಸಾಲಿ, 1·44 ಚದರದ ತಾರಸಿ ಮಾಳಿಗೆಯ ಭಾಗ ಮತ್ತು 6 ಅಂಕಣಗಳ ತಳ್ಳಿ ಹೊಸ್ತಿಲ ಮಾಳಿಗೆಯ ಭಾಗ.	64	$\frac{18+16}{2}$	ರಸ್ತೆ.	ರಸ್ತೆ.	ದುಂಡಣ್ಣನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಬಂದಿಕ್ಕೂ ಇರುವ ಬಹಳ ತಾತ್ಕಾಲಿಕ ಮತ್ತು ಗಾಣಿ ಸಂಬಂಧಕ್ಕೆ ಅಪಜಯಿಯಾಗಿದೆ. ಆದ್ದರಿಂದ ಸದರಿ ಪ್ರದೇಶವನ್ನು ಭವಿಷ್ಯಕ್ಕೆ ಅವಶ್ಯಕವಾಗಿದೆ.

ತಾರೀಖು 5ನೇ ಡಿಸೆಂಬರ್ 1896.

ನಂ. 6513.—ಮಿ. 1223, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ್ ಸಂಸ್ಥಾನಾಮುಳೆ ದರೋಬಸ್ತು ಪಬ್ಲಿಕ್ ಆಫಿಸುಗಳೂ ಕ್ರಿಸ್ತಮಸ್ ರಜಾಬಗ್ಯಾಗಿ, 1896ನೇ ಡಿಸೆಂಬರ್ 24ನೇ ಬೃಹಸ್ಪತಿವಾರದ ಲಾಗಾಯತು 1897ನೇ ಜನವರಿ 2ನೇ ಶನಿವಾರದ ವರಿಗೆ, ಉಭಯದಿನಗಳೂ ಕೇರಿ, ಬರಖಾಷ್ತ್ ಮಾಡಲ್ಪಡತಕ್ಕದ್ದು.

2. ಜರೂರಿಯಾತ್ ಕೆಲಸ ನಡಿಯುವ ಬಗ್ಯೆ ಇಲಾಖಾ ಮೊಖ್ತೆಸರರುಗಳಿಂದ ಏರ್ಪಾಡು ಮಾಡಲ್ಪಡತಕ್ಕದ್ದು.

3. ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಚೇರಿಗಳಿಗೂ ಮತ್ತು ಜವಾಬಂದಿ ಕೆಲಸದಮೇಲಿರುವ ಆಫಿಸರುಗಳಿಗೂ ಲಗಾವಾಗುವದಿಲ್ಲ.

ನಂ. 6509.—ಲೋ. ಫಂ 65.—95, ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಕುರುವಳ್ಳಿ-ಬರಿಕೆರೆ ಬೀಡಿಯು ಶಿವಮೊಗ್ಗಾ ಡಿಸ್ಟ್ರಿಕ್ಟು ತೀರ್ಥಹಳ್ಳಿ ಷಹರಿನ ಮ್ಯುನಿಸಿಪಲ್ ಸರಹದ್ದುಗಳಿಂದ ವಿನಾಯಿಸಲ್ಪಟ್ಟಿರುತ್ತೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸ್ಯ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷ್ಯನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ ಷಹರ್ ಬಡಾವಣೆ ಬಗ್ಯಾಗಿ ಬೇಕಾಗಿರುತ್ತವೆ:—

ಹೋಬಳಿ.	ತಾಲ್ಲೂಕು.	ಜಿಲ್ಲೆ.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನು ತಪಶೀಲು.				ಚಕ್ಕುಬಂದಿ.			
					ನಂಬ್ರ ಸರ್ವೆ	ವಿಸ್ತಾರ ಗುಂಟೆ	ಬೆಟ್ಟಕ್ಕಾಗುವ ಕಂದಾಯ ಎ. ಗುಂ	ಬೆಲೆ ರೂ. ಆ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಹಾನಗಲ್	ಆಲೂರ ಸಬ್ ತಾಲ್ಲೂಕು.	ಆಲೂರು.	ಆಲೂರು.	ಹುಸೇನ್‌ಸಾಬಿ (ಅನುಭವದಾರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ್ 20ರ ಭಾಗ	ಖುಷ್ಕಿ	1—20	1—4	ಸರ್ವೆ ನಂಬರ್ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ್‌ಸಾಬಿಯ ಮತ್ತು ಇತರರ ಜಮೀನುಗಳು
				ಬಸವಲಿಂಗೇ ಗೌಡ	ಡಿಟೋ	ಡಿಟೋ	1—29	1—8	ಆಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮೀನುಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೇಗೌಡನ ಮತ್ತು ಇತರರ ಮನೆಗಳು ವ:ತ್ತು ಹಿತ್ತಲುಗಳು	ಡಿಟೋ

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸ್ಯ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ 1871ನೇ ಇಸವಿಯ 1ನೇ ನಂಬರ್ ಕಾಲ್ನಡಿಗೆಯ ಅಕ್ರಮ ಪ್ರವೇಕವನ್ನ ನಿರೋಧಪಡಿಸುವ ಬಗ್ಯೆ ಉಂಟಾದ ಆಕ್ಟಿನ 12ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ್ ಗವರ್ಣಮೆಂಟಿನವರು ಆಜ್ಞಾಪಿಸುವದೇನಂದರೆ, ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ಸರಹದ್ದುಗಳಲ್ಲಿ ರಾತ್ರೆ 8 ಘೆಂಟೆಯಿಂದ ಪ್ರಾತಃಕಾಲ 4 ಘೆಂಟೆ ವರಿಗೂ ಅಕ್ರಮವಾಗಿ ಪ್ರವೇಕ ಮಾಡುವ ಕಾಲ್ನಡಿಗೆಗಳನ್ನ ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುರ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ಒಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಿಸಿಯಾದ ಕುದರೆ, ತಟ್ಟು, ಕುದರೆ ಗಂಡುಮರಿ, ಕುದರೆ ಹೆಣ್ಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಠಗರು, ಹೆಣ್ಣು ಠಗರು, ಕುರಿ, ಕುರಿಮರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 2ನೇ ಆಕ್ಟೋಬರ್ 1896.

ನಂ. 3576.--ರೆ. 1228, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ ಅರ್ಪೆಡಿಕ್ಸ್ ಎಚ್ಚಿನಲ್ಲಿ ಕಂಡ ರೂಲಿನ 1 ಮತ್ತು 4ನೇ ಪ್ಯಾರಾಗಳಿಗೆ ಈ ಕೆಳಗೆ ಕಂಡ ಜಾಸ್ತಿ ಅಂಶಗಳನ್ನು ಶೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ಣಮೆಂಟಿನವರು ಅಪ್ಪಣೆ ಕೊಡುತ್ತಾರೆ:—

(1) ಪ್ಯಾರ 1ರ ಆಖೈರಿನಲ್ಲಿ ಸೇರಿಸತಕ್ಕದ್ದು "ಪರಂತು, ಗ್ಯಾಂಟು 50 ಎಕರೆಗಳಿಗೆ ಮಿಾರಲ್ಪಟ್ಟಾಗ ಅದು ಗವರ್ಣಮೆಂಟಿನವರ ಮುಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

(2) ಪ್ಯಾರಾ 4ರಲ್ಲಿ, "ಮತ್ತು" ವ "ಷಾತೂತು" ಎಂಬ ಮಾತುಗಳ ಮಧ್ಯದಲ್ಲಿ "ಕಾಫಿ" ಎಂಬ ಮಾತನ್ನು ಶೇರಿಸತಕ್ಕದ್ದು.

2. ಈ ಮೇರೆ ತಿದ್ದುಪಡಿಯಾದ ಎರಡು ಪ್ಯಾರಾಗಳು ಈ ಕೆಳಗೆ ಕಂಡಂತೆ ಓದತಕ್ಕದ್ದು;

"ಪ್ಯಾರಾ 1 ಜಂಗಲಿ ಮತ್ತು ಸಾದೆ ಲಾಯಖ್ ಮರಗಳನ್ನು ಹಾಕತಕ್ಕ ಬಗ್ಯೆ ಕೊಡುವದಕ್ಕೆ ಆಕ್ಷೇಪವಿಲ್ಲದಿರುವ ಸ್ಥಳದಲ್ಲಿ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ, ಕೊಡುವ ತಾರೀಖು ಲಾಗಾಯತು 20 ವರುಷಗಳ ವರವಿಗೂ ಕಂದಾಯ ಮಾಫಿಯಿಂದ ಆಕಾರ ಕಾಣದ ಸರ್ಕಾರೀ ಬಂಜರು ಜಮೀನು ಕೊಡಲ್ಪಡುವದು, ಆ ತರುವಾಯ ಪೂರಾ ಕಂದಾಯ ವಸೂಲ್ಮಾಡಲ್ಪಡುವದು. ಪರಂತು, ಗ್ಯಾಂಟು 50 ಎಕರೆಗಳಿಗೆ ಮಿಾರಲ್ಪಟ್ಟಾಗ ಅದು ಗವರ್ಣಮೆಂಟಿನವರ ಮುಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

"ಪ್ಯಾರಾ 4. ಜಮೀನು ಹೊಂದಿದವನು ಗಿಡಗಳ ಕೆಳಗೆ ಧಾನ್ಯ ಮುಂತಾದ ಇತರ ಕೈರುಗಳನ್ನು ಬೆಳದುಕೊಳ್ಳಬಹುದು. ಅಂತಾ ಸಾಗುವಳಿ ಬಗ್ಗೆ ಬೇಕಾಗುವ ನೀರನ್ನು ಸಂತಾರದ ಜಲಾಧಾರವಲ್ಲದೆ ಖಾಸಗಿ ಜಲಾಧಾರದಿಂದ ತೆಗದುಕೊಳ್ಳುವ ಪಕ್ಷಕ್ಕೂ, ಮತ್ತು ಕಾಫಿ, ಪಾತೂತು, ಕಬ್ಬು, ಜಾಲಾರಿ ಯಾ ಅರಗಿನ ಗಿಡಗಳನ್ನು ಹಾಕದೆ ಇರುವ ಪಕ್ಷಕ್ಕೂ ಯಾವ ವಿಧವಾದ ಕಂದಾಯವು ದಾಖಲ್ಮಾಡಲ್ಪಡಲಾರದು. ಪರಂತು ಅವನು ಸಾಗುವಳಿ ಬಗ್ಯಾಗಲಿ ಯಾ ತೋಪು ಹಾಕತಕ್ಕ ಬಗ್ಯಾಗಲಿ ಸರ್ತಾರ ಸಂಬಂಧವಾದ ಕೆರೆಗಳು ಯಾ ನಾಲೆಗಳು ಮುಂತಾದವುಗಳಿಂದ ನೀರನ್ನು ಉಪಯೋಗಿಸಿಕೊಳ್ಳಬೇಕೆಂತ ಅಪೇಕ್ಷಿಸಿದಲ್ಲಿ ಸರ್ತಾರದ ನೀರಿನಿಂದ ತರೀ ಸಾಗುವಳಿ ಆಗುವ ಖುಷ್ಕಿ ಜಮೀನುಗಳ ಮೇಲೆ ವಾಡಿಕೆಯಾಗಿ ದಾಖಲಾಗುವ ನೀರು ಸರ್ದಿಯನ್ನು ಕೊಡತಕ್ಕದ್ದು.

ತಾರೀಖು 1ನೇ ನವಂಬರ್ 1896.

ನಂ. 4181.—ಫಾ. ಫೈ. 39—95, ಸ್ರ 78ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳ ಪ್ರಕಾರ ಮೈಸೂರ ಗವರ್ನಮೆಂಟಿನವರು ಸ್ಥಾಪಿಸಿದ್ಧಪಡಿಸುವದೇನಂದರೆ, 1895ನೇ ಸೆಪ್ಟಂಬರ್ 4ನೇ ಮಕ್ತುಂ 2574—ಫಾ. 141ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಈ ಕೆಳಗೆ ಕಂಡ ಚಕ್ಕುಬಂದಿ ಮಾಡಿ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇಷನ್ ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಮೇರೆ "ಸ್ಟೇಟ್ ಫಾರೆಸ್ಟ್" ಆಗಿ ವಿಂಗಡಿಸಲ್ಪಡತಕ್ಕದ್ದು:—

ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
7	ಮತ್ತಾವಾರ ಸಂದಲ್ ರಿಜರ್ವ್, ಚಿಕ್ಕಮಗಳೂರ್ ತಾಲ್ಲೂಕು, ಸರ್ವೆ ನಂಬರ್ 93 (ಮತ್ತಾವಾರ) ಮತ್ತು 3 (ದಂಬದಹಳ್ಳಿ)	ಸುಮಾರು 146 ಎಕರೆಗಳು.	ಉತ್ತರಕ್ಕೆ—3 ಅಡಿ ಅಗಲ 3 ಅಡಿ ಆಳ ಉಳ್ಳ ಕಾಲುವೆ ಮತ್ತು 9 ಅಡಿ ಅಗಲ ವುಳ್ಳ ಪಾಕ್ ಮಾಡಲ್ಪಟ್ಟ ಲೈನು ಮತ್ತಾವಾರ ಗ್ರಾಮದ ಸರ್ವೆ ನಂ. 93ರಲ್ಲಿ ಬಂದು ಸ್ಥಳದಿಂದ ಹೊರಟು ಅದೇ ನಂಬರಿನ ಉದ್ದಕ್ಕೂ "ಬೂವ್ಮನಕೆರೆ ಮತ್ತು ಚಾಡವ್ಮನ ವನ"ಕ್ಕೆ ಕೀರಿದ ಹಾಗೆ ಉತ್ತರಕ್ಕೆ ಹೋಗುತ್ತವೆ. ಪೂರ್ವಕ್ಕೆ—ಉತ್ತರ ದಿಕ್ಕಿನಲ್ಲಿ ಕಾಲುವೆ ಮತ್ತು ಲೈನು ಕೊನೆ ಮುಟ್ಟುವ ಸ್ಥಳಗಳಿಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ದಕ್ಷಿಣಕ್ಕೆ ಹೊರಟು ಮತ್ತಾವಾರ ಗ್ರಾಮದ ಸರ್ವೆ ನಂ. 93 ಮತ್ತು ದಂಬದಹಳ್ಳಿ ಗ್ರಾಮದ ನಂ. 3 ಇವುಗಳ ಉದ್ದಕ್ಕೂ ಹಾದು "ಭೈರವ್ಮನ ಗೊಳಲಕ್ಕಿ ಕಟ್ಟೆ" ಎಂಬದಾಗಿ ಕರೆಯಲ್ಪಟ್ಟ ಬಂದು ಸ್ಥಳದಲ್ಲಿ ಅದೇ ನಂಬರಿನಲ್ಲಿ ಕೊನೆ ಮುಟ್ಟುತ್ತವೆ. ದಕ್ಷಿಣಕ್ಕೆ—"ಭೈರವ್ಮನ ಗೊಳಲಕ್ಕಿ ಕಟ್ಟೆ" ಇಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ಪಶ್ಚಿಮಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3ರ ಉದ್ದಕ್ಕೂ ಹಾದು ದಂಬದಹಳ್ಳಿಯಿಂದ ಆಲದ ಗದ್ದೆಗೆ ಹೋಗುವ ಕಾಲುದಾರಿಯನ್ನು ದಾಟಿ ಆದೇ ಗ್ರಾಮದ ಸರ್ವೆ ನಂ. 3ರಲ್ಲಿ ಕೊನೆಮುಟ್ಟುತ್ತವೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಕಾಲುವೆ ಮತ್ತು ಲೈನು ಈಶಾನ್ಯಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3 ಮತ್ತು ಮತ್ತಾವಾರದ ನಂ. 93 ಇವುಗಳ ಉದ್ದಕ್ಕೂ ಅವು ಹೊರಟ ಸ್ಥಳವನ್ನ ಸಂಧಿಸುವವರಿಗೂ ಹೋಗುತ್ತವೆ.

ತಾರೀಖು 26ನೇ ನವಂಬರ್ 1896.

ನಂ. 4789.—ರೆ. 1661, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ XXVIIನೇ ರೂಲ್ 1ನೇ ಪ್ಯಾರಾವಿಗೆ ಈ ಕೆಳಗೆ ಕಂಡ ನಿಯಮವನ್ನ ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"ಪರಂತು ಬಂದು ಸರ್ವೆ ನಂಬರ್ ಖುಷ್ಕಿ ವ ತರೀ ಜಮೀನುಗಳು ಸಹಿತವಾಗಲಿ ಯಾ ಖುಷ್ಕಿ ತರೀ ವ ಬಾಗಾಯತು ಜಮೀನುಗಳಾಗಲಿ ಅಡಗಿಸಿಕೊಂಡಿದ್ದ ಪಕ್ಷದಲ್ಲಿ, ಈ ರೂಲುಗಳನುಸರಿಸಿ ಮಾಡಲ್ಪಟ್ಟ ಯಾವ ವಿಭಾಗವು ರೆವಿನ್ಯೂ ಸರ್ವೆ ಸೂಪರಿಟೆಂಡೆಂಟ್ ರವರಿಂದ ಮುಂಜೂರ್ಮಾಡಲ್ಪಟ್ಟಿದ್ದ ಹೊರ್ತು ನೆರವೇರಿಸಲ್ಪಡಲಾರದು. ಸದರೀಯವರಿಗೆ ಇಂಥಾ ಪ್ರತಿ ಸಂಗತಿಯೂ ತೃಪ್ತಿಯಾಯಿತು ದಾ ಖಲೆಯೊಡನೆ ರಿಪೋರ್ಟು ಮಾಡಲ್ಪಡತಕ್ಕದ್ದು."

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ್ ತಾಲ್ಲೂಕಿಗೆ ವೆಳತವಾಗಿದ್ದ "ಹಲಸೂರು ಹೋಬಳಿ" ಯನ್ನ ಇನ್ನು ಮೇಲೆ 1896ನೇ ಡಿಸೆಂಬರ್ ಗುರೆ) ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ನಂ. 4802.—ರೆ. ಫೈ. 37—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 173ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲು ಯವರಿಗೆ 1896ನೇ ನವಂಬರ್ 21ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರು ಸದರೀ ರಾಜಗೋಪಾಲಾಚಾರ್ಲು ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 26ನೇ ನವೆಂಬರ್ 1896.

ನಂ. 4905.—ಫಾ. ಫೈ. 27—95, ಸ್ರ 1896ನೇ ಇಸವಿ ಜೂ 22ನೇ ಮರ್ಕುಂ 14031.—ಮಿ. 2101ನೇ ನಂಬರ್ ಇಸ್ತಿಹಾರ್‌ನಾಮೆಯನ್ನು ತಿದ್ದುಪಡಿಮಾಡಿ, 1895ನೇ ಇಸವಿ ಡಿಸೆಂಬರ್ 13ನೇ ಮರ್ಕುಂ 5491—ಫಾ. ಫೈ. 60.—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಫಾರೆಸ್ಟುಗಳ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಜಿ. ಈ. ರಕ್ಕೆಟ್ಸ್‌ಯವರಿಗೆ ಕೊಟ್ಟಿದ್ದ ರಜಾದಿಂದ ವಾಪಸು ಬಂದ 1896ನೇ ಅಕ್ಟೋಬರ್ 26ನೇ ತಾರೀಖು ಲಾಗಾಯತು ಫಾರೆಸ್ಟು ಆಫಿಸರುಗಳ ಈ ಕೆಳಗೆ ಕಂಡ ಬಡ್ತಿಗಳನ್ನು ಮ ಯಥಾಸ್ಥಾನಕ್ಕೆ ಹೋಗುವದನ್ನು ಗವರ್ಮೆಂಟಿನವರು ಅಪ್ಪಣೆಕೊಡುತ್ತಾರೆ:—

1. ಫಾರೆಸ್ಟುಗಳ ಎರಡನೇ ಕ್ಲಾಸ್ ಆಕ್ಟಿಂಗ್ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಬಿ. ಹೀರಾಸಿಂಗ್ ಯವರು, ಸದರೀ ಕ್ಲಾಸ್ ನಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ.

2. ಮೆಸ್ಟರ್ ಸಿ. ಅಪ್ಪಯ್ಯನವರು, ಮೆಸ್ಟರ್ ರಸ್ಸಲ್‌ಯವರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ 2ನೇ ಕ್ಲಾಸ್ ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

3. ಮೆಸ್ಟರ್ ಎಂ. ಜಿ. ರಾಮರಾಯರು, 2ನೇ ಕ್ಲಾಸಿನಲ್ಲಿ ಆಕ್ಟ್ ಮಾಡುತಲಿರುವ ಮೆಸ್ಟರ್ ಅಪ್ಪಯ್ಯನವರಿಗೆ ಬದಲಾಗಿ, 3ನೇ ಕ್ಲಾಸ್ ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

4. ಮೂರನೇ ಕ್ಲಾಸ್ ಆಕ್ಟಿಂಗ್ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಕೆ. ಶಾಮಯ್ಯಂಗಾರ್ರು, ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಗ್ರೇಡಿಗೆ ವಾಪಸ್ ಬರತಕ್ಕದ್ದು.

ತಾರೀಖು 27ನೇ ನವೆಂಬರ್ 1896.

ನಂ. 4848.—ರೆ. ಫೈ. 52.—96, ಹಾಸನ ಡಿಸ್ಟ್ರಿಕ್ಟು ಆಲೂರ ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಟಿ. ವೆಂಕಟರಮಣಯ್ಯನವರು, 1896ನೇ ಅಕ್ಟೋಬರ್ 4ನೇ ಮರ್ಕುಂ 3681.—ರೆ. ಫೈ. 52.—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಟ್ಟಿದ್ದ ರಜಾವನ್ನು ಮಾಹೆ ಮಜಕೂರ್ 7ನೇ ತಾರೀಖಿನ ಮಧ್ಯಾನ್ಹಾತ್ಪರದ ಲಾಗಾಯತು ಉಪಯೋಗಿಸಿಕೊಂಡು ಮಾಹೆ ಮಜಕೂರ್ 16ನೇ ಮರ್ಕುಮಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸ್ ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ನವೆಂಬರ್ 1896.

ನಂ. 4887.—ರೆ. ಫೈ. 110.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟು ಯಕ್ಸ್‌ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಮಿರ್ ನಿಜಾಮುದ್ದೀನ್ ಆಲಿಖಾನ್‌ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವೆಂಬರ್ 1896.

ನಂ. 4914.—ರೆ. ಫೈ. 83.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಅಮಲ್ದಾರ್ ಶಾಮಯ್ಯಂಗಾರ್ರಿಗೆ, 1896ನೇ ನವೆಂಬರ್ 14ನೇ ಮರ್ಕುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 4816.—ಫೈ. 373, ಗವರ್ಮೆಂಟ್ ಆಸಿಸ್ಟೆಂಟ್ ಸೆಕ್ರಟೆರಿಯವರಾದ ಮೆಸ್ಟರ್ ಸಿ. ಶ್ರೀಕಂಠೇಶ್ವರ ಅಯ್ಯರ್, ಬಿ. ಏ, ಬಿ. ಎಲ್., ಯವರು ಕಂಟ್ರೋಲರವರ ಆಫಿಸಿನಲ್ಲಿ ಅಸಿಸ್ಟೆಂಟ್ ಕಂಟ್ರೋಲರೆಂಬ ಹುದ್ದೆಯಿಂದ ಕೆಲಸಕ್ಕಾಗಿ ಹಂಗಾಮಿ ತರೀಕ್ ನಿಯುಮಿಸಲ್ಪಟ್ಟಿರುತ್ತಾರೆ. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 1ನೇ ಡಿಸೆಂಬರ್ 1896.

ನಂ. 4945.—ಫಾ. ಫೈ. 91.—95, ಷಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಫಾರೆಸ್ಟುಗಳ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ, 1896ನೇ ನವೆಂಬರ್ 1ನೇ ಮರ್ಕುಂ 4107.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಮೆಡಿಕಲ್ ಸರ್ಟಿಫಿಕೇಟ್ ಮೇಲಿನ ರಜಾ ಇನ್ನೂ ಮೂರು ತಿಂಗಳುಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ. ಸದರೀ ರಜಾ ಪೂರೈಸಿದ ತರುವಾಯ ಅವರು ಕೆಲಸದ ಬಗ್ಯಾಗಿ ಫಾರೆಸ್ಟುಗಳ ಕ್ವರ್ಸರ್ವೇಟರವರ ಹೆಡ್‌ಕ್ವಾರ್ಟರ್ ಆಫಿಸಿಗೆ ರಿಪೋರ್ಟ್ ಮಾಡತಕ್ಕದ್ದು.

2. ಸದರೀ ಮೆಸ್ಟರ್ ಬಿ. ಶ್ರೀನಿವಾಸರಾಯರು, ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ ಯಕ್ಸ್‌ಟ್ರಾ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಜೆ. ಜೆ. ಮ್ಯಾಟೀರೊ ಯವರು, ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿಯೂ ಮತ್ತು 2ನೇ ಗ್ರೇಡ್ ರೇಂಜರ್ ಮೆಸ್ಟರ್ ಎಂ. ಶ್ರೀನಿವಾಸರಾಯರು, ಫಾರೆಸ್ಟುಗಳ ಯಕ್ಸ್‌ಟ್ರಾ ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿಯೂ ಆಕ್ಟಿಂಗ್ ತರೀಕ್ ಇರತಕ್ಕದ್ದು.

ತಾರೀಖು 5ನೇ ಡಿಸೆಂಬರ್ 1896.

ನಂ. 5093.—ಫೈ.—409, ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಎಂ. ಚಂಗಯ್ಯಶೆಟ್ಟಿಯವರು, ಮೈಸೂರ್ ವ್ಯವಸಾಯ ಸಂ ಬಂಧದ ಬ್ಯಾಂಕುಗಳ ಇನ್‌ಸ್ಪೆಕ್ಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 2ನೇ ಡಿಸೆಂಬರ್ 1896.

ನಂ. 5008.—ರೆ. ಫೈ. 81—96, ಸ್ಟೇಟ್ ಹುಜೂರ್ ಟ್ರೈಜರಿಯ ಇನ್‌ಚಾರ್ಜ್ ಆಫಿಸರರಾದ ಮೆಸ್ಸರ್ ಎ. ವೀರಾಸಾಮಿ ಮೊದಲಿಯಾರ್ರಿಗೆ, 1896ನೇ ನವಂಬರ್ 18ನೇ ಮಾರ್ಕ್ಕಂ 4444—ಫೈ. 346ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಮೂರು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ಡಿಸೆಂಬರ್ 1896.

ನಂ. 5110.-ರೆ. 1736, ವರ್ಗವಾಗಿ ಶಿವಮೊಗ್ಗೆಗೆ ಹುಕುಂ ಪ್ರಕಾರ ಹೋಗಬೇಕಾದ ಡೆಪ್ಯೂಟಿ ಕಮ್ಮಿಷನರ್ ಮೆಸ್ಸರ್ ಬಿ. ಕೆ. ವೆಂಕಟವರದಯ್ಯಂಗಾರ್ ಯವರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಮಾಹೆ ಮಜಕೂರು 4ನೇ ಮಾರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ, ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 5113.—ರೆ. ಫೈ. 81—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಸ್ಟೇಟ್ ಹುಜೂರ್ ಟ್ರೈಜರಿಯ ಇನ್‌ಚಾರ್ಜ್ ಆಫಿಸರ್ ಮೆಸ್ಸರ್ ಎ. ವೀರಾಸಾಮಿಮೊದಲಿಯಾರ್ರಿಗೆ, 1896ನೇ ಡಿಸೆಂಬರ್ 7ನೇ ಮಾರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನಾರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಟ್ರೈಜರರ್ ಮೆಸ್ಸರ್ ಟಿ. ರಾಯಲು ಚೆಟ್ಟಿಯವರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಸರ್ ವೀರಾಸಾಮಿ ಮೊದಲಿಯಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಖಜಾನಾ ಬಕ್ಷಿಯರಾಗಿ ಆಕ್ಟ್ ಮಾಡತಕ್ಕದ್ದು.

ನಂ. 5117.—ಫಾ. ಫೈ. 90—95, ಮೈಸೂರ್ ಡಿಸ್ಟ್ರಿಕ್ಟಿನ ಫಾರೆಸ್ಟ್ಸುಗಳ ಡೆಪ್ಯೂಟಿ ಕರ್ನಸರ್‌ವೇಟರ್ ಮೆಸ್ಸರ್ ಟಿ. ಅಬ್ದುಲ್ ಕರೀಯವರು, ಅವರಿಗೆ 1896ನೇ ಸೆಪ್ಟಂಬರ್ 1ನೇ ಮಾರ್ಕ್ಕಂ 2338—ಫಾ. ಫೈ. 90—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳೂ ಏಳು ದಿನಗಳ ಪ್ರಿವಿಲೀಜ್ ರಜಾವನ್ನು 1896ನೇ ಸೆಪ್ಟಂಬರ್ 8ನೇ ಮಾರ್ಕ್ಕಮಿನ ಮಧ್ಯಾನ್ಹಾತ್ಪರದ ಲಾಗಾಯತು ಉಪಯೋಗಿಸಿಕೊಂಡು 1896ನೇ ನವಂಬರ್ 12ನೇ ತಾರೀಖಿನ ಮಧ್ಯಾನ್ಹಾತ್ಪರ ಕೆಲಸದ ಮೇಲೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಮೂರು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 5120.—ಫಾ. ಫೈ. 92—95, ಫಾರೆಸ್ಟ್ಸುಗಳ ಅಸಿಸ್ಟೆಂಟ್ ಕರ್ನಸರ್‌ವೇಟರ್ ಮೆಸ್ಸರ್ ವೈ. ಸೀತಾರಾಮಯ್ಯನವರು, ಅವರಿಗೆ 1896ನೇ ಮೇ 29ನೇ ಮಾರ್ಕ್ಕಂ 10367—ಫಾ. ಫೈ. 92—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳೂ ಹದಿನಾರು ದಿನಗಳ ಪ್ರಿವಿಲೀಜ್ ರಜಾವನ್ನು 1896ನೇ ಜೂನ್ 7ನೇ ಮಾರ್ಕ್ಕಂ ಲಾಗಾಯತು ಉಪಯೋಗಿಸಿಕೊಂಡು 1896ನೇ ಆಗಸ್ಟ್ 21ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಎರಡು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.